


International Journal of Kannada Research
www.kannadajournal.com

ISSN: 2454–5813
IJSR 2015; 1(1): 41-47
© 2015 IJKS
www.kannadajournal.com
Received: 01-06-2015
Accepted: 06-07-2015

**ಡಾ. ಕೆ ರಾಮಕೃಷ್ಣಯ್ಯ**
ಪ್ರಾಧ್ಯಾಪಕರು, ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಕರ್ನಾಟಕ, ಭಾರತ

Correspondence
**ಡಾ. ಕೆ ರಾಮಕೃಷ್ಣಯ್ಯ**
ಪ್ರಾಧ್ಯಾಪಕರು, ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಕರ್ನಾಟಕ, ಭಾರತ

# ವೃತ್ತಿರಂಗ ಸಂಗೀತಕ್ಕೆ ಆರ್. ಪರಮಶಿವನ್‌ರವರ ಕೊಡುಗೆ

**ಡಾ. ಕೆ ರಾಮಕೃಷ್ಣಯ್ಯ**

**ಸಾರಲೇಖ**
ಸಂಗೀತ ವಿದ್ವಾನ್ ಪರಮಶಿವನ್ ಅವರು ಕನ್ನಡ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಬಹುರೂಪವಾಗಿ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ಧೀಮಂತ ವ್ಯಕ್ತಿತ್ವ, ಸಂಗಿತ ಸಿದ್ಧಿ, ವೃತ್ತಿ ರಂಗಭೂಮಿ ಮೂಲ ಕಲಾ ರಕ್ಷಣೆ, ಜ್ಞಾನ ಪ್ರಸಾದ ಮೂಲಕ ಗಾಯಕರಾಗಿ, ವಾದಕರಾಗಿ, ನಾಟಕ ನಿರ್ದೇಶಕರಾಗಿ, ಸಂಘಟಕರಾಗಿ, ಹೊಸರಾಗಗಳನ್ನು ಸಂಗೀತದಲ್ಲಿ ಅನ್ವೇಷಣೆ ಮಾಡಿ ತಮ್ಮ ಕೊಡುಗೆಯನ್ನು ಸಲ್ಲಿಸುತ್ತಿರುವ, ಪರಮಶಿವನ್ ಅವರ ಬದುಕು ಸಂಗೀತ ಸೇವೆ ವೈವಿಧ್ಯಮಯವಾದುದು ಹಾಗೂ ಕುತೂಹಲಕಾರಿಯಾಗಿದೆ.

## ಪರಿಚಯ

ಪರಮಶಿವನ್ ಅವರು ಸಂಗಿತ ಕ್ಷೇತ್ರದಲ್ಲಿ ಸಲ್ಲಿಸಿದ ಮಹೋನ್ನತ ಸೇವೆ ಅನನ್ಯವಾದುದು. ತಮ್ಮ ದಿನ ನಿತ್ಯದ ಬದುಕಿನ ಮಧ್ಯೆ ಅನೇಕ ಜನ ಶಿಷ್ಯ ಪರಂಪರೆಯನ್ನು ಹುಟ್ಟು ಹಾಕಿದ್ದಾರೆ. ಈ ಮೂಲಕ ಸಾಂಸ್ಕೃತಿಕ ಕ್ಷೇತ್ರದಲ್ಲಿ ಬೆಳವಣಿಗೆಯಾಗುತ್ತ ಸಾರ್ಥಕ ಬದುಕನ್ನು ಸವೆಸಿದ್ದಾರೆ. ಪರಮಶಿವನ್ ಅವರ ಜೀವಾದರ್ಶಗಳು ಅನುಕರಣೀಯವಾಗಿವೆ. ಒಬ್ಬ ಸಂಗೀತ ಸಾಧಕ, ವೃತ್ತಿರಂಗಭೂಮಿಯಲ್ಲಿ, ನಾಟಕ ನಿರ್ದೇಶನ, ಸಂಗೀತ ಸೇವೆಗಿಂತ ಅವರನ್ನು ಪರಿಚಯಿಸುವಾಗ ಪೂರ್ವದಲ್ಲಿ ಅವರ ಜೀವನವನ್ನು ಪರಿಸರವನ್ನು, ಯುಗವನ್ನು ಅರಿತುಕೊಳ್ಳುವುದು ಅತ್ಯವಶ್ಯಕವಾದುದು.

ಪರಮಶಿವನ್ ಅವರು ೨೯-೦೯-೧೯೩೭ರಲ್ಲಿ ಕರ್ನಾಟಕ ರಾಜ್ಯದ ಸಾಂಸ್ಕೃತಿಕ ನಗರಿ ಎಂದು ಪ್ರಸಿದ್ಧಿ ಪಡೆದಿರುವ ಮೈಸೂರಿನಲ್ಲಿ ಜನಿಸಿದರು. ತಂದೆ ರಾಮಕೃಷ್ಣ, ತಾಯಿ ರುಕ್ಮಿಣಮ್ಮ ಇವರು ಅತ್ಯಂತ ಬಡತನದಿಂದ ಜೀವನ ಮಾಡುತ್ತಿದ್ದರು. ಪರಮಶಿವನ್‌ರವರು ಪ್ರಧಾನ ಪ್ರಕಾರಗಳಾದ ರಂಗಭೂಮಿ, ರಂಗಸಂಗೀತ, ಹಾಡುಗಾರಿಕೆಯಲ್ಲಿ ತುಂಬಾ ಪರಣಿತರು. ಅದೇ ರೀತಿಯಾಗಿ ಇತರೆ ಪ್ರಕಾರಗಳಾದ ಹರ್ಮೋನಿಯಂ ವಾದನ, ವೀಣೆ, ಪಿಟೀಲು ವಾದನಗಳನ್ನು ಮಾಡುತ್ತಾರೆ. ಸಂಗೀತ ನಿರ್ದೇಶನ, ನಾಟಕ ನಿರ್ದೇಶನ, ಹೊಸ ರಾಗಗಳ ಸಂಯೋಜನೆಯನ್ನು ಕರಗತ ಮಾಡಿಕೊಂಡಿದ್ದಾರೆ. ಪ್ರಸ್ತುತ ಇವರು ಬೆಂಗಳೂರಿನ ರಾಜಾಜಿನಗರದಲ್ಲಿ ವಾಸವಾಗಿದ್ದಾರೆ. ಇವರು ಹುಟ್ಟಿ ಬೆಳೆದದ್ದು ಮೈಸೂರು ನಗರವೇ ಆದರೂ ಇವರು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದು ಬೆಂಗಳೂರನ್ನು. ಇವರ ಸಂಗೀತ ಶಿಕ್ಷಕರಾಗಿ ವಿವಿಧೆಡೆ ಸೇವೆ ಸಲ್ಲಿಸಿದ ನಂತರ ಬೆಂಗಳೂರಿನಲ್ಲಿ ಖಾಯಂ ಆಗಿ ನೆಲೆಯೂರಿದ್ದಾರೆ. ಇವರು ಓದಿದ್ದು ಪಿ.ಯು.ಸಿವರೆಗೆ ಆದರೂ ಇವರಿಗೆ ವಾದ್ಯಗಳನ್ನು ನುಡಿಸುವುದೆಂದರೆ

ಎಲ್ಲಿಲ್ಲದ ಸಂತಸ. ಬಾಲ್ಯದಲ್ಲಿಯೇ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದರು. ಹಾಡುಗಾರಿಕೆಯಲ್ಲಿ ವಿದ್ವತ್, ವೀಣೆ ಮತ್ತು ಪಿಟೀಲು ವಿದ್ವತ್ ಪದವಿಯನ್ನು ಪೂರೈಸಿದರು. ಇವರು ವಿದ್ಯಾ ಇಲಾಖೆಗೆ ೧೯೭೦ರಲ್ಲಿ ಸಂಗೀತ ಶಿಕ್ಷಕರಾಗಿ ಸೇವೆಗೆ ಸೇರಿದ ನಂತರ ೧೯೯೪ರಲ್ಲಿ ನಿವೃತ್ತಿಯನ್ನು ಹೊಂದಿದರು. ಇವರು ಸರ್ಕಾರಿ ಹುದ್ದೆಯಲ್ಲಿದ್ದರೂ ಸಂಗೀತ, ರಂಗಭೂಮಿಯ ನಂಟನ್ನು ಬಿಟ್ಟುಕೊಡದೇ ಸದಾ ಈ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ಕರ್ನಾಟಕ ನಾಟಕ ಅಕಾಡೆಮಿ, ಸಂಗೀತ ಅಕಾಡೆಮಿಗಳಿಂದಲೂ ಮಾನ್ಯತೆಯನ್ನು ಪಡೆದುಕೊಂಡಿದ್ದು, ಈ ಅಕಾಡೆಮಿಗಳು ಏರ್ಪಡಿಸುವ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾರೆ. ಎಂಬತ್ತರ ತಾರುಣ್ಯದಲ್ಲಿಯೂ ಪರಮಶಿವನ್‌ರವರಿಗೆ ಬತ್ತರ ಉತ್ಸಾಹ, ಇನ್ನೂ ಕ್ರಿಯಾಶೀಲರಾಗಿದ್ದಾರೆ. ಅವರ ಸಾಧನೆಗಳನ್ನು ಗುರುತಿಸಿ, ಅನೇಕ ಸಂಗ ಸಮಸ್ಥೆಗಳು ಅವರನ್ನು ಸನ್ಮಾನಿಸಿ ಗೌರವಿಸಿವೆ. ಪರಕಾಲ ಮಠದ ಸ್ವಾಮಿಗಳಿಮದ `ಸಂಗೀತ ಕಲಾ ಜ್ಯೋತಿ' ಎಂಬ ಬಿರುದಿನೊಂದಿಗೆ ಸನ್ಮಾನ (೧೯೮೫), ನಾಟಕ ಅಕಾಡೆಮಿಯ ಪ್ರಶಸ್ತಿ (೧೯೯೧), ಸುವರ್ಣ ಕರ್ನಾಟಕ ರಾಜ್ಯ ಪ್ರಶಸ್ತಿ (೨೦೦೫), ರಾಷ್ಟ್ರಮಟ್ಟದ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ(೨೦೦೫), ಗಾನಕಲಾ ಪರಿಷತ್ ಸನ್ಮಾನ (೨೦೦೫), ಬೆಂಗಳೂರಿನ ಗಾಯನ ಸಮಾಜದಿಂದ, ವರ್ಷದ ಕಲಾವಿದ (೨೦೦೬), ಎಂಬ ಗೌರವದೊಡನೆ ಸನ್ಮಾನ ಮುಂತಾದವುಗಳನ್ನು ಮುಖ್ಯವಾಗಿ ಹೆಸರಿಸಬಹುದು. ಸದ್ಯ ಇವರು ವಿಶ್ರಾಂತ ಜೀವನವನ್ನು ನಡೆಸುತ್ತಿದ್ದು ತಮ್ಮ ಬಳಿಗೆ ಬರುವ ಯುವ ಕಲಾವಿದರಿಗೆ ಸಂಗೀತ, ರಂಗಭೂಮಿ ಕುರಿತು ಮಾಹಿತಿಯನ್ನು ನೀಡಿ ಪ್ರೋತ್ಸಾಹಿಸುತ್ತಿದ್ದಾರೆ.

ಪರಮಶಿವನ್ ಅವರು ಒಂದೇ ನಿರ್ದಿಷ್ಟವಾದ ಶೈಲಿಗೆ ಅಂಟಿಕೊಂಡವರಲ್ಲ. ಅವರು ಕರ್ನಾಟಕ ಸಂಗೀತ, ಹಿಂದೂಸ್ಥಾನಿ, ಸಂಗೀತ, ರಂಗಗೀತೆ, ಸುಗಮಸಂಗೀತ, ಜನಪದ ಸಂಗೀತ, ನಾಟಕಗಳಲ್ಲಿ ಅಭಿನಯ, ಹರ್ಮೋನಿಯಂ ವಾದಕರಾಗಿ, ಪಿಟೀಲು ವಾದಕರಾಗಿ, ವೀಣೆಯ ವೈಣಿಕನಾಗಿ, ಸಂಗೀತ ನಿರ್ದೇಶಕನಾಗಿ, ಸಂಗೀತ ಶಿಕ್ಷಕರಾಗಿ, ಹೊಸ ಹೊಸ ರಾಗಗಳನ್ನು ಸೃಷ್ಟಿಸುವುದು ಹೀಗೆ ರಂಗಭೂಮಿಯಲ್ಲಿ ಪರಮಶಿವನ್ ತಿಳಿಯದ ವಿಷಯವಿಲ್ಲ ಎನ್ನುವಷ್ಟುಮಟ್ಟಿಗೆ ತಮ್ಮನ್ನು ತಾವು ರಂಗಭೂಮಿ ಮತ್ತು ಸಂಗೀತ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಪರಂಪರೆಯಿಂದ ಬಂದ ಕರ್ನಾಟಕ ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತವನ್ನು ಕಲಿತುಕೊಂಡರು ಸಹ ಅದರಲ್ಲಿ ತಮ್ಮ ಸೃಜನಶೀಲತೆಯನ್ನು ವ್ಯಕ್ತಪಡಿಸಿ, ನಾಟಕ ಮತ್ತು ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಇವರು ಖ್ಯಾತ ಹಾಸ್ಯ ಕಲಾವಿದ ಮುಸುರಿ ಕೃಷ್ಣಮೂರ್ತಿ ಮತ್ತು ಮಾಸ್ಟರ್ ಹಿರಣ್ಣಯ್ಯನವರ ಅವರ ಬಾಲ್ಯದ ಸ್ನೇಹಿತರು ಆಗಿದ್ದು, ಮೈಸೂರಿನಲ್ಲಿ ಒಂದು ಹೊತ್ತಿನ ಊಟಕ್ಕೂ ಗತಿ ಇಲ್ಲದ ಸೋದರ ಮಾವ ಸೀನ ಮಾಮನ ಭಿಕ್ಷಾನ್ನದಿಂದ ಒಂದು ಹೊತ್ತು ತಿಂದುಕೊಂಡು ನಾಲ್ಕು ವರ್ಷದವರೆಗೆ ಕಾಲಹರಣ ಮಾಡಿದರು. ತನ್ನ ಸ್ನೇಹಿತ ಮುಸುರಿ ಕೃಷ್ಣಮೂರ್ತಿ ಅವರು ಶಾಲೆಗೆ ತರುತ್ತಿದ್ದ ಡಬ್ಬಿಯಲ್ಲಿ ಒಂದಿಷ್ಟು ತಿಂದು ಜೀವನ ನಡೆಸಿದರು.

## ಗುರುಗಳು

ಇವರು ನಿರ್ದಿಷ್ಟ ಕಲಾ ಸಂಸ್ಥೆಯಲ್ಲಿ ಕಲಾ ಶಿಕ್ಷಣವನ್ನು ಪಡೆಯಲಿಲ್ಲ. ಇವರಿಗೆ ಬಾಲ್ಯದಲ್ಲಿ ಆಸ್ಥಾನ ವಿದ್ವಾನ್ ದೇವೇಂದರಪ್ಪನವರು ಸಂಗೀತ ಶಿಕ್ಷಣವನ್ನು ನೀಡಿದರು. ಹಾಗೆಯೇ ಶಿವಪ್ಪ ಎಂಬ ಇನ್ನೊಬ್ಬ ವಿದ್ವಾನ್ ಸಂಗೀತ ಶಿಕ್ಷಣವನ್ನು ನೀಡಿದರು. ಆದರೆ ಇವರು ಹೆಚ್ಚಾಗಿ ಕಲಿತದ್ದು ನಾಟಕ ಕಂಪನಿಗಳಲ್ಲಿ ಎಂಬುದು ಗಮನಾರ್ಹ ಅಂಶವಾಗಿದೆ.

## ಆಕಾಶವಾಣಿ ಮಾನ್ಯತೆ

ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ರಂಗಸಂಗೀತ, ಸುಗಮಸಂಗೀತ, ರಾಗ ಸಂಯೋಜನೆ, ಹಾಡುಗಾರಿಕೆ ಇವುಗಳಲ್ಲಿ ಪರಿಣಿತಿಯನ್ನು ಪಡೆದಿರುವ ಆರ್.ಪರಮಶಿವನ್ ಅವರ ಹಾಡುಗಾರಿಕೆ ಮೆಚ್ಚಿ ಅವರಿಗೆ ಮದ್ರಾಸ್ ಆಕಾಶವಾಣಿ ಕೇಂದ್ರದವರು ಇವರಿಗೆ ಕಾರ್ಯಕ್ರಮಗಳನ್ನು ನೀಡುತ್ತಾರೆ. ಹಾಗೆಯೇ ಮೈಸೂರಿನ ಆಕಾಶವಾಣಿ, ಬೆಂಗಳೂರು ಆಕಾಶವಾಣಿ ಕೇಂದ್ರದವರು ಸಾಕಷ್ಟು ಕಾರ್ಯಕ್ರಮಗಳನ್ನು ನೀಡಿ ಇವರಿಗೆ ಆಸೆಯಾಗಿದ್ದಾರೆ. ಇದರಿಂದ ಇವರ ಆರ್ಥಿಕ ಪರಿಸ್ಥಿತಿ ಕೊಂಚ ಮಟ್ಟಿಗೆ ಸುಧಾರಿಸಿತೆಂದೇ ಹೇಳಬೇಕು. ಇದರ ಜೊತೆಗೆ ಇವರು ನಾಟಕ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದರು. ಇವರ ಆಕಾಶವಾಣಿ ಕಾರ್ಯಕ್ರಮಗಳಿಗೆ ಶ್ರೋತೃಗಳು ಸ್ಪಂದನೆಯನ್ನು ನೀಡಿದ್ದು, ಇವರ ಕಾರ್ಯಕ್ರಮಗಳನ್ನು ಹಾಗಾಗ ಪ್ರಸಾರ ಮಾಡುವಂತೆ ಪತ್ರಗಳು ಬರುತ್ತಿದ್ದವು ಎಂಬುದು ಪ್ರಮುಖ ಅಂಶವಾಗಿ ಕಂಡು ಬರುತ್ತದೆ. ೧೯೫೨ರಿಂದ ಮೈಸೂರು ಆಕಾಶವಾಣಿಯಲ್ಲಿ ಸಂಗೀತ ಕಾರ್ಯಕ್ರಮಗಳು ದೊರಕುತ್ತಿದ್ದವು. ಆ ಮೂರು ದಿನಗಳು ಅಕಾಶವಾಣಿ ಕಾರ್ಯಕ್ರಮಕ್ಕೆ ಹೋಗಿ ಬರಲು ಸುಬ್ಬಯ್ಯನಾಯ್ಡುಗಳು ಅನುಮತಿ

ಕೊಡುತ್ತಿದ್ದರು. ಇದೇ ಸಂದರ್ಭದಲ್ಲಿ ಇವರಿಗೆ ಬೆಂಗಳೂರು ಆಕಾಶವಾಣಿಯವರು ``ನಿಮ್ಮ ಹಾಡುಗಾರಿಕೆ ಕಾರ್ಯಕ್ರಮವನ್ನು ಶ್ರೋತೃಗಳು ಬಹಳವಾಗಿ ಮೆಚ್ಚಿಕೊಂಡು ಹತ್ತಾರು ಪತ್ರಗಳನ್ನು ಬರೆದಿದ್ದಾರೆ. ಇದೇ ರೀತಿ ಸದಾ ನಿಮ್ಮ ಸಹಕಾರ ಇರಲಿ' ಎಂದು ಮೆಚ್ಚುಗೆ ಪತ್ರವನ್ನು ಬರೆದು ಮೂರು ತಿಂಗಳಿಗೊಮ್ಮೆ ಕರ್ನಾಟಕ ಸಂಗೀತ ಕಾರ್ಯಕ್ರಮವನ್ನು ಕೊಡುತ್ತಿದ್ದರು.

**ದೂರದರ್ಶನ ಮಾನ್ಯತೆ:** ಬೆಂಗಳೂರಿನಲ್ಲಿ ದೂರದರ್ಶನ ಕೇಂದ್ರವು ನಿರ್ಮಾಣವಾದ ನಂತರ ನಾಡಿನ ಕಲಾವಿದರನ್ನು ಗುರುತಿಸಿ ಅವರ ಕಾರ್ಯಕ್ರಮಗಳನ್ನು, ಪ್ರತಿಭೆಯನ್ನು ಪ್ರಸಾರ ಮಾಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ನೆಲೆಸಿರುವ ರಂಗಗೀತೆಗಳ ಗಾರುಡಿರೆಂದೇ ಬಿರುದು ಪಡೆದಿರುವ ಆರ್.ಪರಮಶಿವನ್ ಅವರ ರಂಗಗೀತೆಗಳ ಗಾಯನ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದೆ.

**ರಾಜ್ಯ ಅಕಾಡೆಮಿಗಳ ಮಾನ್ಯತೆ:** ಪರಮಶಿವನ್ ರವರು ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ಸಂಗೀತ ಅಕಾಡೆಮಿಗಳಲ್ಲಿ ಮಾನ್ಯತೆಯನ್ನು ಪಡೆದುಕೊಂಡಿದ್ದು, ಇವರ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸಿದ್ದಾರೆ. ಇವರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ನಿಯೋಜಿಸಿ ಇವರ ಮೂಲಕ ಹಲವಾರು ತರಬೇತಿಗಳನ್ನು ಆಯೋಜಿಸಿದ್ದಾರೆ. ಇದರಿಂದಾಗಿ ನಾಡಿನ ಅನೇಕ ಸಂಸ್ಥೆಗಳಿಗೆ ಇವರು ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ.

**ಸಂಗೀತ ಶಿಕ್ಷಣ :** ಮೂಲತಃ ಇವರು ಬಾಲ್ಯದಿಂದ ಸಂಗೀತ, ನಾಟಕ, ವಾದ್ಯಗಳ ನುಡಿಸುವಿಕೆಯಲ್ಲಿ ತಲ್ಲಿನರಾಗಿದ್ದು, ನಂತರದ ದಿನಗಳಲ್ಲಿ ಸಂಗೀತ ಶಿಕ್ಷಣ ನೀಡುವ ನಿಟ್ಟಿನಲ್ಲಿ ಇವರು ಶಿಕ್ಷಣ ಇಲಾಖೆಗೆ ಸೇರಿದ್ದು, ಉಡುಪಿ, ಮೈಸೂರು ಮತ್ತು ಬೆಂಗಳೂರು ವಿಭಾಗಗಳಲ್ಲಿ ಸಂಗೀತ ಶಿಕ್ಷಣವನ್ನು ನೀಡಿ ನೂರಾರು ಸಂಗೀತ ಶಿಕ್ಷಣದ ಶಿಷ್ಯವೃಂದವನ್ನೇ ಸಂಪಾದಿಸಿದ್ದಾರೆ.

**ಇವರ ಮೊದಲ ಗಾಯನ ಕಾರ್ಯಕ್ರಮ**

ಆರ್.ಪರಮಶಿವನ್ ಅವರು ಮೊದಲ ಕಾರ್ಯಕ್ರಮವನ್ನು ನೀಡಿದ್ದು, ೧೯೪೨ರಲ್ಲಿ. ಅದು ಚೆನ್ನೈóÉನಲ್ಲಿ. ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಶ್ರೀ ಸತ್ಯಮೂರ್ತಿಗಳ ಪುತ್ರಿಯ ವಿವಾಹದಲ್ಲಿ. ಗಾನಸರಸ್ವತಿ ಎಂ.ಎಸ್.ಸುಬ್ಬಲಕ್ಷ್ಮಿಯವರ ಸಂಗೀತ ಕಛೇರಿಯು ಏರ್ಪಾಡಾಗಿತ್ತು. ಅವರ ಶಾಸ್ತ್ರೀಯ ಸಂಗೀತವನ್ನು ಸವಿದು ಹರ್ಷಿಸಲು, ಸಾವಿರಾರು ಜನರು ವಿವಾಹದ ಸಭಾಂಗಣದಲ್ಲಿ ಆಸೀನರಾಗಿದ್ದರು. ಎಂ.ಎಸ್.ಸುಬ್ಬಲಕ್ಷ್ಮೀಯವರು ಆಗಮಿಸುವ ಸಮಯ ಸಮೀಪಿಸುತ್ತಿತ್ತು. ಆಗ ಅಲ್ಲಿಯೇ ಸಂಗೀತ ಕೇಳಲು ಬಹು ಉತ್ಸುಕನಾಗಿ ಕುಳಿತಿದ್ದ ಒಬ್ಬ ಹತ್ತು ವರ್ಷದ ಹುಡುಗನನ್ನು ಕಲ್ಯಾಣಿ ಫಿಲಂಸ್‌ನ ನಿರ್ದೇಶಕರಾದ ಶ್ರೀ ಕೆ.ಸುಬ್ರಹ್ಮಣ್ಯಂ ವೇದಿಕೆಯ ಮೇಲೆ ಕರೆತಂದು, ಒಂದೆರಡು ಕೀರ್ತನೆಗಳನ್ನು ಹಾಡಲು ಹೇಳಿದರು. ಕೇವಲ ಹತ್ತು ವರ್ಷದ ಆ ಬಾಲಕ ಸ್ವಲ್ಪವೂ ಬೆದರದೆ ಬೆಚ್ಚದೇ `ನಗುಮೊಮು' ಮತ್ತು `ರಾ ರಾ ರಾಜೀವ ಲೋಚನ' ಎಂಬ ಎರಡು ಕೀರ್ತನೆಗಳನ್ನು ಸಹೃದಯರು ಸ್ತಂಭೀಭೂತರಾಗುವAತೆ ಹಾಡಿ, ಬಹು ಮೆಚ್ಚುಗೆಯ ಕರತಾಡನವನ್ನು ಗಿಟ್ಟಿಸಿದ.

ಆ ಸಮಯಕ್ಕೆ ಸರಿಯಗಿ ಗಾನಸರಸ್ವತಿ ಎಂ.ಎಸ್.ಸುಬ್ಬಲಕ್ಷ್ಮಿöಮಯವರು ವೇದಿಕೆಗೆ ತಾವು ಹಾಡಲು ಆಗಮಿಸಿ, ಆ ಹುಡುಗನ ಸಂಗೀತ ಕೇಳಿ ಬಹಳ ಹರ್ಷಪಟ್ಟು ಹುಡುಗಣಿಗೆ ಶಹಬಾಸ್‌ಗಿರಿ ನೀಡಿ, ನಂತರ ತಮ್ಮ ಸಂಗೀತ ಕಛೇರಿಯಿಂದ ಸಹೃದಯರನ್ನು ಮಂತ್ರಮುಗ್ಧರನ್ನಾಗಿ ಮಾಡಿದರು.

ಮನೆಯಲ್ಲಿ ಪರಮಶಿವನ್ ಅವರಿಗೆ ಅವರ ತಾಯಿಯವರು, ಮದುವೆಯಾಗುವುದಿದ್ದರೆ, ಬ್ರಾಹ್ಮಣರ ಹುಡಿಗೆಯನ್ನೇ ಸೊಸೆಯನ್ನಾಗಿ ತರಬೇಕಪ್ಪ ಎಂದು ಒತ್ತಾಯ ಹೇರಿದ್ದರು. ಅದರಂತೆ ಇವರು ಅಯ್ಯಂಗಾರ್ ಪಂಗಡಕ್ಕೆ ಸೇರಿದ ಜಯ, ವಿಜಯ ಹೀಗೆ ನಾಲ್ಕು ಹೆಣ್ಣುಗಳಲ್ಲಿ ಒಬ್ಬಳನ್ನು ವಿವಾಹವಾಗಲು ಇಚ್ಛಿಸಿದರು.

**ಡಾ.ರಾಜ್‌ಕುಮಾರ್‌ರ ಒಡನಾಟ**

೧೯೪೮ರಲ್ಲಿ ರಾಜ್‌ಕುಮಾರ್‌ರವರ ತಂದೆ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರು, ಮಕ್ಕಳೊಂದಿಗೆ ಕನಕಪುರದ ಗುರಿಕಾರರ ಮನೆಯಲ್ಲಿ ವಾಸವಾಗಿದ್ದರು. ಇದಕ್ಕೂ ಮುನ್ನ ೬ ವರ್ಷಗಳಿಂದಲೂ ಪರಮಶಿವನ್‌ರ ಹಾಡುಗಾರಿಕೆಯ ಬಗ್ಗೆ ಬಹಳ ಅಭಿಮಾನವಿದ್ದ ಅವರಿಗೂ ಕಷ್ಟ ದಿನಗಳಾಗಿದ್ದಾಗ್ಯೂ ಗುರಿಕಾರರು ಕೊಟ್ಟ ರಾಗಿ ಹಿಟ್ಟನ್ನು ಮುದ್ದೆ ಮಾಡಿ ಪರಮಶಿವನ್, ಮುತ್ತುರಾಜು (ಡಾ.ರಾಜ್), ವರದರಾಜು, ಶಾರದ ಇವರೊಡನೆ ಒಟ್ಟಿಗೆ ಕುಳಿತು ``ಹಂಚಿ ತಿನ್ನುವುದರಲ್ಲಿ ಆನಂದವಿರುತ್ತೆ ಕೂಸೇ'' ಎಂದು ಇವರಿಗೂ ಒಂದು ಪಾಲು ಕೊಟ್ಟು ತಿನ್ನಿಸುತ್ತಿದ್ದರು. ಅಂದಿನಿAದಲು ಪರಮಶಿವನ್ ಮತ್ತು ರಾಜ್‌ಕುಮಾರ್ ಗೆಳೆತನ ಕಡೆಯವರೆಗೂ ಆತ್ಮಿಯತೆಯಿಂದ ಕೂಡಿತ್ತು. ೧೯೫೦ರಲ್ಲಿ ಪರಮಶಿವನ್‌ರ ಸೋದರ ಮಾವ ಸೀನಮಾಮನ ಜೊತೆಯಲ್ಲಿ ಕಾಶಿ, ಪ್ರಯಾಗ, ಗಯ, ತ್ರಿವೇಣಿಸಂಗ ಈ ಎಲ್ಲ ತೀರ್ಥ ಯಾತ್ರೆಗಳನ್ನು ಮುಗಿಸಿ

ಬೆಂಗಳೂರಿಗೆ ಬಂದರು. ಮತ್ತೆ ಜೀವನದ ಸಮಸ್ಯೆ ಮುಂದೇನೋ ಎನ್ನುವಷ್ಟರಲ್ಲಿ ಅದೃಷ್ಟವಶಾತ್ ಎಂ.ವಿ.ಸುಬ್ಬಯ್ಯನಾಯ್ಡುರವರ ``ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ'ಯಲ್ಲಿ ಹರ್ಮೋನಿಯಂ ವಾದಕನಾಗಿ, ಸಂಗೀತ ನಿರ್ದೇಶಕನಾಗಿ ಸೇರಿಕೊಂಡರು. ಅಂದಿನಿAದ ಊಟ, ತಿಂಡಿ ಮುಂತಾದ ಜೀವನದ ಸಮಸ್ಯೆಗಳು ಬಗೆಹರಿದು, ಬಿಡುವಿನ ವೇಳೆಯಲ್ಲಿ ಸುಮ್ಮನೆ ಕುಳಿತು ಮಾಡುವುದೇನೆಂದು ಹಿಂದೆ ಕಲಿತಿದ್ದ ಪಿಟೀಲು, ವೀಣೆ, ಹಾಡುಗಾರಿಕೆ, ಇವನ್ನು ಅಭ್ಯಾಸ ಮಾಡಲು ಪ್ರಾರಂಭಿಸಿದರು. ಅಂದು ಇವರೊಂದಿಗೆ ಕಂಪನಿ ಸೇರಿದ ಮುತ್ತುರಾಜ್ (ಡಾ.ರಾಜ್)ರವರು, ಇವರ ಜೊತೆಯಲ್ಲಿ ೪ ವರ್ಷಗಳ ಕಾಲ ಸಂತೋಷವಾಗಿ ಕಾಲಕಳೆದರು.

೧೯೫೧ರಲ್ಲಿ ಸಂಗಿತ ಪ್ರಧಾನವಾದ ಸಂಪೂರ್ಣ ರಾಮಾಯಣ ನಾಟಕದಲ್ಲಿ ಆಂಜನೇಯನ ಪಾತ್ರವನ್ನು ರಾಜ್‌ಕುಮಾರ್‌ರವರಿಗೆ ಕಲಿಸಿದರು. ಆ ನಾಟಕ ಪ್ರಯೋಗವಾಯಿತು. ಆಮೇಲೆ ಆತನಿಗೂ ಒಳ್ಳೆಯ ಹೆಸರು ಬಂದಿತು. ಸುಬ್ಬಯ್ಯನಾಯ್ಡುರವರು, ಶ್ರೀಮತಿ ಲಕ್ಷ್ಮೀಬಾಯಿಯವರು ಇವರನ್ನು ಮಗನಿಗಿಂತಲೂ ಹೆಚ್ಚಾಗಿ ನೋಡಿಕೊಂಡು, ಅವರು ಹೋದ ಕಡೆಯಲ್ಲೆಲ್ಲಾ ಪರಮಶಿವನ್‌ರನ್ನು ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಒಮ್ಮೆ ಗೋಕರ್ಣಕ್ಕೆ ಅವರೊಡನೆ ಕಾರಿನಲ್ಲಿ ಹೋಗಿದ್ದಾಗ ಅಲ್ಲಿನ ದೇವಸ್ಥಾನದ ಅರ್ಚಕರಲ್ಲಿ ಕೆಲವರು, ಇವರನ್ನು ಸುಬ್ಬಯ್ಯನಾಯ್ಡುರವರ ಮಗನೆಂದೂ ಮತ್ತೆ ಕೆಲವರು ಲಕ್ಷ್ಮೀಬಾಯಿಯವರ ಮಗನೆಂದೂ ತಿಳಿದುಕೊಂಡಿದ್ದರು. ಯಾತ್ರೆ ಮುಗಿಸಿ ಹೊರಡುವಾಗ ಇವರು ಸುಬ್ಬಯ್ಯನಾಯ್ಡುರವರ ಮಗನಲ್ಲವೆಂಬ ನಿಜಾಂಶವನ್ನು ಅವರಿಂದಲೇ ಕೇಳಿ ತಿಳಿದುಕೊಂಡರು.

೧೯೫೧ರಲ್ಲಿ ಮಂಡ್ಯದಲ್ಲಿ ಸುಬ್ಬಯ್ಯನಾಯ್ಡು ಕಂಪನಿ ಮೊಕ್ಕಾಂ ಹೂಡಿತ್ತು. ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಶಕುಂತಲ ಎಂಬ ಬ್ರಾಹ್ಮಣರ ಹುಡುಗಿಯನ್ನು ಅಲ್ಲಿಯೇ ಕೆಲಸಕ್ಕೆ ಸೇರಿದ ಚಿಕ್ಕ ಹುಡುಗ ತಿಳಿಯದೆ ಸುಬ್ಬಯ್ಯನಾಯ್ಡುರವರ (ಡಬಲ್ ಬ್ಯಾರಲ್ ಗನ್) ಕೋವಿಯನ್ನು ಒತ್ತಿದಾಗ ಆ ಹುಡುಗಿ ಸ್ಥಳದಲ್ಲೇ ಸತ್ತಳು. ನಿರಪರಾಧಿ ಸುಬ್ಬಯ್ಯನಾಯ್ಡುರವರೇ ಹುಡುಗಿಯನ್ನು ಕೊಂದರೆಂದು ಪೊಲೀಸ್ ಕೇಸ್ ಆಗಿ, ಸುಮಾರು ತಿಂಗಳುಗಟ್ಟಲೆ ಕೋರ್ಟಿಗೆ ಅಲೆಯುವಂತಾಯಿತು. ಕಡೆಗೆ ಸುಬ್ಬಯ್ಯನಾಯ್ಡುಗಳು ನಿರಪರಾಧಿ ಎಂದು ಕೇಸು ವಜಾ ಆಯಿತು. ಆದರೆ ಆ ಗನ್ನನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿತು. ಈ ಎಲ್ಲ ಕತೆಯು ಪರಮಶಿವನ್‌ರು ಸುಬ್ಬಯ್ಯ ನಾಯ್ಡು ಕಂಪನಿಯಲ್ಲಿದ್ದಾಗಲೆ ನಡೆಯಿತು. ಅನಂತರ ಹಾಸನ ಜಾತ್ರೆಯಲ್ಲಿ ಮೊಕ್ಕಾಂ ಮಾಡಿ ಎರಡೆರಡು ನಾಟಕಗಳು ಮಾಡುತ್ತಿದ್ದರು. ಪ್ರತಿಯೊಂದು ನಾಟಕಕ್ಕೂ ೩ ಸಾವಿರದಿಂದ ನಾಲ್ಕು ಸಾವಿರವರೆಗೆ ಕಲೆಕ್ಷನ್ ಆಗಿ ಜಯಭೇರಿ ಬಾರಿಸಿತು.

೧೯೫೨ರಲ್ಲಿ ಚಿಕ್ಕಮಗಳೂರು, ಸಾಗರ, ಕಡೂರು, ಅರಸೀಕೆರೆ, ಸಕಲೇಶಪುರಗಳಲ್ಲಿ ಕಂಪನಿ ಮೊಕ್ಕಾಂನಲ್ಲಿದ್ದಾಗ, ಪರಮಶಿವನ್‌ರಿಗೆ ಹಾಡುಗಾರಿಕೆ ವಿದ್ವತ್ ಪರೀಕ್ಷೆಯಲ್ಲಿ ಪಾಸಾದ ಸರ್ಟಿಫಿಕೇಟು ಬಂತು. ಅದನ್ನು ಕಂಡ ಸುಬ್ಬಯ್ಯನಾಯ್ಡುಗಳ ಆನಂದಕ್ಕೆ ಪಾರವೇ ಇರಲಿಲ್ಲ. ೧೯೫೨ರಿಂದ ಮೈಸೂರು ಆಕಾಶವಾಣಿಯಲ್ಲಿ ಸಂಗೀತ ಕಾರ್ಯಕ್ರಮಗಳು ದೊರಕುತ್ತಿದ್ದವು. ಆ ಮೂರು ದಿನಗಳು ಅಕಾಶವಾಣಿ ಕಾರ್ಯಕ್ರಮಕ್ಕೆ ಹೋಗಿ ಬರಲು ಸುಬ್ಬಯ್ಯನಾಯ್ಡುಗಳು ಅನುಮತಿ ಕೊಡುತ್ತಿದ್ದರು. ನಂತರ ತುಮಕೂರು, ಶಿವಮೊಗ್ಗದಲ್ಲಿ ಕಂಪನಿ ಮೊಕ್ಕಾಂ ಮಾಡಿದ್ದಾಗ ಹೆಸರುವಾಸಿ ಸಾಹಿತಿಗಳಾದ ಎಸ್.ಕೆ.ಕರೀಂಖಾನ್‌ರವರು ಕಂಪನಿಗೆ ಬಂದು ನಿರ್ದೋಷಿ ಎಂಬ ನಾಟಕವನ್ನು ಬರೆದುಕೊಟ್ಟರು ಅಭ್ಯಾಸ ಮಾಡಿಸಿ ಆಡಿಸಿದರು.

೧೯೫೩ರಲ್ಲಿ ಚಿತ್ರದುರ್ಗದಲ್ಲಿ ಕಂಪನಿ ಮೊಕ್ಕಾಂನಲ್ಲಿದ್ದಾಗ, ಮುತ್ತುರಾಜ್ (ಡಾ.ರಾಜ್), ಕರೀಂಖಾನರು ಮತ್ತು ಪರಮಶಿವನ್‌ರು ಮೂವರು ನಾಟಕ ಮುಗಿದ ಮೇಲೆ ಚಿತ್ರದುರ್ಗ ಕೋಟೆ ಮೇಲೆ ಕುಳಿತಾಗ ರಾಜ್‌ಕುಮಾರ್‌ರವರು `ಕರೀಂಖಾನ್‌ಗೆ ನನಗೆ ಬರುವ ೮೦ ರೂಪಾಯಿ ಸಂಬಳದಲ್ಲಿ ನಾನು ಹೇಗೆ ಮುಂದುವರೆಯುವುದು ಮುಂದೆ ನಮ್ಮ ಭವಿಷ್ಯವೇನು? ಎಂದು ಕಷ್ಟಸುಖಗಳನ್ನು ಕರೀಂಖಾನರಲ್ಲಿ ಹಂಚಿಕೊಳ್ಳುತ್ತಿದ್ದರು. ಆಗ ಪರಮಶಿವನ್‌ಗೆ ೧೦೦ ರೂ. ಸಂಬಳ ಬರುತ್ತಿದ್ದರೂ, ಮುಂದೆ ಕಂಪನಿ ಬಿಟ್ಟರೆ ಜೀವನದ ಗತಿ ಏನು? ಎಂದು ನನ್ನ ದುಃಖವನ್ನು ಅವರ ಹತ್ತಿರ ತೋಡಿಕೊಳ್ಳುತ್ತಿದ್ದೆ. ಹಸುಗೂಸಿನ ಸ್ವಭಾವದ ಕರೀಂಖಾನರು ಇವರಿಬ್ಬರನ್ನು ಸಂತೈಸಿ ನೀವು ಯೋಚಿಸಬೇಡಿ ಮುಂದೆ ನಿಮ್ಮಿಬ್ಬರಿಗೂ ಒಳ್ಳೆ ಭವಿಷ್ಯವಿದೆ ಎಂದು ಹುರಿದುಂಬಿಸುತ್ತಿದ್ದರು. ಎಷ್ಟೋ ಬಾರಿ ಕತ್ತಲೆಯಲ್ಲಿ ಚಿತ್ರದುರ್ಗದ ಕೋಟೆಗೆ ಹೋಗಿ ಪರಮಶಿವನ್, ರಾಜ್‌ಕುಮಾರ್ - ಹಾವನ್ನು ತುಳಿದು ಹೆದರಿ ಓಡಿ ಬಂದಿದ್ದರು. ಆಗಿನ್ನು ರಾಜ್ ಕುಮಾರ್‌ರವರಿಗೆ ಮದುವೆಯಾಗಿರಲಿಲ್ಲ.

## ರಂಗಭೂಮಿಗೆ ಪ್ರವೇಶದ ಹಿನ್ನೆಲೆ

ಮೈಸೂರಿನಲ್ಲಿ ಒಂದು ಹೊತ್ತಿನ ಊಟಕ್ಕೂ ಗತಿ ಇಲ್ಲದ ಸೋದರ ಮಾವ ಸೀನ ಮಾಮನ ಭಿಕ್ಷಾನ್ನದಿಂದ ಒಂದು ಹೊತ್ತು ತಿಂದುಕೊಂಡು ನಾಲ್ಕು ವರ್ಷದವರೆಗೆ ಕಾಲಹರಣ ಮಾಡಿದರು.

೧೯೩೫ರಲ್ಲಿ ಬೆಂಗಳೂರಿನಲ್ಲಿ ಗುಬ್ಬಿವೀರಣ್ಣನವರ ಶಿವಾನಂದ ಥಿಯೇಟರ್ (ಈಗಿನ ಮೂವಿಲ್ಯಾಂಡ್ ಟಾಕೀಸ್)ನಲ್ಲಿ `ಚಾಮುಂಡೇಶ್ವರಿ' ಕಂಪನಿಯ ವಸಂತಸೇನೆ ನಾಟಕದಲ್ಲಿ ಕೊಟ್ಟೂರಪ್ಪನವರ ಜೊತೆ ಚಾರುದತ್ತನ ಮಗ ರೋಹಸೇನನ ರಂಗ ಪ್ರವೇಶ. ಚಿಕ್ಕ ಎರಡು ಹಾಡುಗಳು ಆರು ಮಾತು. ಅಂದು ನಾಲ್ಕು ವರ್ಷದ ವಯಸ್ಸಿನ ನನ್ನ ಪಾತ್ರ ನೋಡಿ ಪ್ರೇಕ್ಷಕರು ಆಗಿನ ಎರಡು ಬೆಳ್ಳಿ ರೂಪಾಯಿಗಳನ್ನು ಕೊಟ್ಟು ಹರಿಸಿದರು. ಅದರ ಪರಿಣಾಮ ದಾನಶೂರ ಕರ್ಣದಲ್ಲಿ ಕರ್ಣನ ಮಗ ವೃಷಕೇತು, ರಾಜಸೂಯಯಾಗ ನಾಟಕದಲ್ಲಿ ಜರಾಸಂಧನ ಮಗ ಸಹದೇವ, `ತುಕಾರಾಂ' ನಾಟಕದಲ್ಲಿ ತುಕಾರಾಂನ ಮಗ ಮಹಾದೇವ, `ಭಕ್ತಪ್ರಹ್ಲಾದ' ನಾಟಕದಲ್ಲಿ ಹಿರಣ್ಯಕಶ್ಯಪು' ಮಗ ಪ್ರಹ್ಲಾದ ಪಾತ್ರಗಳನ್ನು ಮಾಡುತ್ತಿದ್ದೆ'' ಎಂದು ಪರಮಶಿವನ್ ಹೇಳಿದ್ದಾರೆ.

ಪರಮಶಿವನ್ ಅವರ ಅಕ್ಕನವರಾದ ಹಿರಿಯ ರಂಗಕಲಾವಿದೆ ಆರ್.ನಾಗರತ್ನಮ್ಮನವರು ಹೇಳುವಂತೆ ``ತನ್ನ ನಮ್ಮ ಪರಮಶಿವು ಚಿಕ್ಕ ವಯಸ್ಸಿನಲ್ಲಿಯೇ ಅಂದರೆ, ೩ ವರ್ಷ ಬಾಲಕನಾಗಿದ್ದಾಗಲೆ ದೇವರು ಅವನಿಗೆ ಒಳ್ಳೆಯ ಜ್ಞಾನ ಕೊಟ್ಟಿದ್ದರು. ಶ್ರೀ ಚಾಮುಂಡೇಶ್ವರಿ ಕಂಪನಿಯಲ್ಲಿ ಪೌರಾಣಿಕ ನಾಟಕಗಳು ಮೈಸೂರಿನಲ್ಲಿ ನಡೆಯುತ್ತಿತ್ತು. ನಾನು ಮತ್ತು ಪರಮಶಿವು ಯಾವಾಗಲೂ ನಾಟಕಗಳನ್ನು ನೋಡಲು ಹೋಗುತ್ತಿದ್ದೆವು. ಆಗಲೆ ನಮ್ಮ ಹುಡುಗ ಕಂಪನಿಯಲ್ಲಿ ನಾಟಕಕ್ಕೆ ಸೇರಿಕೊಂಡ. ನಾಟಕದಲ್ಲಿ ಬಾಲಕನ ಪಾತ್ರಗಳು ವಸಂತಸೇನಾ ನಾಟಕದಲ್ಲಿ ಚಾರುದತ್ತನ ಪಾತ್ರ ಮಾಡುತ್ತಿದ್ದ. ಬಾಲಕ ತಂದೆಯನ್ನು ತಬ್ಬಿಕೊಳ್ಳಲು ಹೋಗಿ ಪೊಲೀಸ್‌ನವರನ್ನು ತಬ್ಬಿಕೊಂಡಿದ್ದ! ಆಗಿನ ದಿವಸಗಳಲ್ಲಿ ಬಾಲಕನಾಗಿಯೇ ಒಂದು ಕಂದಪದ್ಯವನ್ನು ಬಹಳ ಶುದ್ದವಾಗಿ ಹಾಡುತ್ತಿದ್ದ. ಅಂದಿನಿAದ ನಾಟಕದ ಕಂಪನಿಯಲ್ಲಿ ಯಾವ ನಾಟಕಗಳನ್ನಾಡಿದರೂ ಬಾಲಕನ ಪಾತ್ರ ಮೀಸಲಾಗಿತ್ತು. ಚಿಕ್ಕ ವಯಸ್ಸಿಗೆ ಅಂದರೆ ೫ನೇ ವಯಸ್ಸಿನಲ್ಲಿ ಸಂಗೀತ ಪಾಠಕ್ಕೆ ಸೇರಿಕೊಂಡಿದ್ದು, ಕಂಪನಿಯಲ್ಲಿ ಹರ್ಮೋನಿಯಂ ಮಾಸ್ಟರ್ ಶಿವಪ್ಪನವರ ಹತ್ತಿರ ಸಂಗೀತಾಭ್ಯಾಸ ಪ್ರಾರಂಭವಾಯಿತು. ಅಲ್ಲಿಂದ ಅವನು ಶಾಲೆಯಲ್ಲಿ ಹೆಚ್ಚು ಕಲಿಯಲಿಲ್ಲ. ಆಗಲೇ ನಾಟಕದ ಒಲವು, ಸಂಗೀತದ ಹುಚ್ಚು.

## ರಂಗಸಂಗೀತಕ್ಕೆ ಪ್ರವೇಶ

೧೯೪೦ರಲ್ಲಿ ಹೊಳೆನರಸೀಪುರದಲ್ಲಿ ಪರಮಶಿವನ್ ಅವರ ಸಂಗೀತ ಕಛೇರಿ ೯ನೇ ವಯಸ್ಸಿನಲ್ಲಾಯಿತು. ಸಂಗೀತ ಕಛೇರಿಗೆ ಹೋಗಲು ಉಡುಪುಗಳು ಇಲ್ಲದ ಕಾರಣ ಹೊಳೆನರಸೀಪುರದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದ ಶ್ರೀ ಕೃಷ್ಣಮೂರ್ತಿಯವರು, ಎರಡು ಪೈಜಾಮು ಮತ್ತು ಎರಡು ಜುಬ್ಬಾ ಹೊಲಿಸಿಕೊಟ್ಟರು. ಚಿಕ್ಕವಯಸ್ಸಿನಲ್ಲಿ ಸಂಗೀತ ಹಾಡಿ ಕಛೇರಿ ಮಾಡಿದ ಇವರನ್ನು ಕಂಡು ಸಭಿಕರು ಸಂತೋಷದಿAದ ಒಂದು ರೂಪಾಯಿ, ಎರಡು ರೂಪಾಯಿ, ಐದು ರೂಪಾಯಿ ಕೊಡುತ್ತಿದ್ದರು. ಅಂದು ಅವರು ಕೊಟ್ಟಿದ್ದ ಹಣದ ಮೊತ್ತ ಇಪ್ಪತ್ತು ರೂಪಾಯಿಗಳಾಗಿದ್ದವು. ಇದಾದ ಎರಡು ವರ್ಷಗಳ ನಂತರ ಮದ್ರಾಸಿನಲ್ಲಿ ಡಾ.ಎಂ.ಎಸ್. ಸುಬ್ಬಲಕ್ಷ್ಮೀಬಾಯಿಯವರ ಕಾರ್ಯಕ್ರಮದಲ್ಲಿ ಎರಡು ಕೀರ್ತನೆಗಳನ್ನು ಹಾಡಿ ಸಭಿಕರ ಮೆಚ್ಚುಗೆಗೆ ಪಾತ್ರರಾದರು.

## ಅಕ್ಕನವರ ನಾಟಕ ಕಂಪನಿ

ನಂತರ ಇವರ ಅಕ್ಕನವರಾದ ಆರ್.ನಾಗರತ್ನಮ್ಮನವರು ಮಾಡಿದ ಸ್ತ್ರೀ ನಾಟಕ ಮಂಡಳಿಗೆ ಇವರನ್ನು ಹರ್ಮೋನಿಯಂ ನುಡಿಸಲು ಆಹ್ವಾನಿಸಿದರು. ಅಂದು ತಿಂಗಳಿಗೆ ಇನ್ನೂರು ರೂಪಾಯಿಯಂತೆ ಗುಬ್ಬಿ ಕಂಪನಿಯಲ್ಲಿ ಸಂಬಳ ತೆಗೆದುಕೊಳ್ಳುತ್ತಿದ್ದರು. ಅಕ್ಕನವರ ಕಂಪನಿಯಲ್ಲಿ ಊಟ, ತಿಂಡಿ ಕಳೆದು ೬೦೦ ಸಂಬಳ ಕೊಡುತ್ತಿದ್ದರು. (ದಿನಕ್ಕೆ ೨೦ ರೂ.ನಂತೆ) ಇದರಿಂದ ಹಣದ ಮುಗ್ಗಟ್ಟು ಸ್ವಲ್ಪ ಸುಧಾರಿಸಿತು. ಮಂಗಳೂರಿನಲ್ಲಿ ಅಕ್ಕನ ಕಂಪನಿಯಲ್ಲಿ ಪರಮಶಿವನ್ ಪ್ರವೇಶ. ಅಕ್ಕನ ಕಂಪನಿಯಲ್ಲಿ ಕೇವಲ ೩ ನಾಟಕಗಳನ್ನು ಆಡುತ್ತಿದ್ದರು. ಕೃಷ್ಣಗಾರುಡಿ, ಸಂಸಾರನೌಕೆ, ಸದಾರಮೆ, ಪರಮಶಿವನ್ ಪ್ರವೇಶ ಮಾಡಿದ ಮೇಲೆ ಎಲ್ಲ ಸ್ತ್ರೀಯರೇ ಇದ್ದ ಕಂಪನಿಯಲ್ಲಿ ಕೃಷ್ಣಲೀಲಾ, ದಾನಶೂರ ಕರ್ಣ, ಗುಲೇಬಕಾವಲಿ, ಮಕ್ಮಲ್ ಟೋಪಿ, ದೇವದಾಸಿ, ಇದಲ್ಲದೆ ಸಂಪೂರ್ಣ ರಾಮಾಯಣ ಮೊದಲಾದ ನಾಟಕಗಳನ್ನು ಅಭ್ಯಾಸ ಮಾಡಿಸಿ ಪ್ರಯೋಗ ಮಾಡಿದ್ದರಿಂದ ಕಂಪನಿಗೆ ಒಳ್ಳೆ ಲಾಭ ಮತ್ತು ಒಳ್ಳೆ ಹೆಸರು ಬಂತು.

## ಸಂಗೀತ ಶಿಕ್ಷಕರಾಗುವ ಹಂಬಲ

ಇದೇ ಸಂದರ್ಭದಲ್ಲಿ ಪರಮಶಿವನ್ ಅವರು ನಾಟಕ ಮತ್ತು ಸಂಗೀತ ಕ್ಷೇತ್ರದ ಜೊತೆಗೆ ಶಿಕ್ಷಣ ಕ್ಷೇತ್ರದ ಕಡೆಗೆ ವಾಲಿದರು. ಇಲ್ಲಿ ಅವರಿಗೆ ಭದ್ರನೆಲೆ ಒದಗಿ ಬಂತು. ೧೯೫೨ರಲ್ಲಿ ಪರಮಶಿವನ್‌ರು ಸಂಗೀತದ ವಿದ್ವತ್ ಪರೀಕ್ಷೆ ಮತ್ತು ೧೯೬೪ರಲ್ಲಿ ವೀಣೆ, ಪಿಟೀಲು ಪರೀಕ್ಷೆಗಳಲ್ಲಿ ತೇರ್ಗಡೆ ಆಗಿದ್ದರೂ, ಸರ್ಕಾರಿ ಶಾಲೆಯ ಸಂಗೀತ ಶಿಕ್ಷಕರಿಗೆ ಎಸ್.ಎಸ್.ಎಲ್.ಸಿ ಆಗಿರಲೇಬೇಕೆಂಬ ಸರ್ಕಾರದ ಆಜ್ಞೆ ಹೊರಬಿದ್ದಿತು. ಕೇವಲ ೨ನೇ ತರಗತಿ ಓದಿದ್ದ ಇವರಿಗೆ ಎಸ್.ಎಸ್.ಎಲ್.ಸಿ ಇಂಗ್ಲಿಷ್, ಗಣಿತ,

ವಿಜ್ಞಾನ, ಸಮಾಜ ಇವೆಲ್ಲವೂ ಕಬ್ಬಿಣದ ಕಡಲೆಯಾಯಿತು. ಯಾವ ಶಾಲೆಯಲ್ಲೂ ಹೋಗಿ ಓದದ ಇವರಿಗೆ ಈ ವಿಭಾಗಗಳೆಲ್ಲವು ಬಹಳ ಕಷ್ಟವಾಗಿ, ಕಡೆಗೆ ಗುರುರಾಘವೇಂದ್ರರಾಯರ ಅನುಗ್ರಹದಿಂದ ಎಲ್ಲ ಪುಸ್ತಕಗಳನ್ನು ತಾವೇ ಕೊಂಡು ತಂದು, ಓದಿಕೊಂಡು ಪರೀಕ್ಷೆಗೆ ಹಾಜರಾದರು. ಗುರುಹಿರಿಯರ ಆಶೀರ್ವಾದದಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಯು ಮೊದಲನೇ ಶ್ರೇಣಿಯಲ್ಲಿ ಉತ್ತೀರ್ಣವಾಗುವಂತೆ ಮಾಡಿತು. ಇದರಿಂದಾಗಿ ಇವರು ನಾಟಕ ಜೀವನವನ್ನು ಬಿಟ್ಟು ವಿದ್ಯಾ ಇಲಾಖೆಯ ಪ್ರೌಢಶಾಲೆಯ ಸಂಗೀತ ಶಿಕ್ಷಕನಾಗಲು ಅನುಕೂಲವಾಯಿತು. ಈ ಮಧ್ಯೆ ಶಿವಮೊಗ್ಗಕ್ಕೆ ೩೫ ಮೈಲಿ ದೂರವಿರುವ ಜೈನರ ಯಾತ್ರಾಸ್ಥಳ ಹೊಂಬುಜ ಕ್ಷೇತ್ರಕ್ಕೆ ಹೋದಾಗ ಇವರ ಗುರುಗಳಾದ ದೇವೇಂದ್ರಪ್ಪನವರು. `ತಮ್ಮ ಹೆಸರನ್ನು ಉಳಿಸಲು ನೀನೇ ಸಮರ್ಥ ಅಲ್ಲಿಗೆ ಹೋಗಿ ನಿನ್ನ ಸಂಗೀತದ ಸೇವೆಯನ್ನು ಪದ್ಮಾವತಿ ಸನ್ನಿಧಿಯಲ್ಲಿ ಮಾಡು. ನಿನ್ನ ಭವಿಷ್ಯವು ಒಳ್ಳೆಯದಾಗುತ್ತದೆ' ಎಂದು ಅಣತಿ ಇತ್ತ ಮೇರೆಗೆ ಹೊಂಬುಜ ಕ್ಷೇತ್ರಕ್ಕೆ ಹೋಗಿ ಕ್ಷೇತ್ರದ ವಿದ್ಯಾರ್ಥಿಗಳಿಗೆ ಕೆಲವರಿಗೆ ವೀಣೆ, ಕೆಲವರಿಗೆ ಪಿಟೀಲು, ಕೆಲವರಿಗೆ ಹಾಡುಗಾರಿಕೆ, ಕೆಲವರಿಗೆ ಮೃದಂಗ ಇವುಗಳನ್ನು ಹನ್ನೊಂದು ತಿಂಗಳಲ್ಲೇ ತರಬೇತಿ ನೀಡಿ ಜ್ಯೂನಿಯರ್ ಪರೀಕ್ಷೆಯಲ್ಲಿ ಎಲ್ಲರೂ ಪ್ರಥಮ ದರ್ಜೆಯಲ್ಲೇ ಉತ್ತೀರ್ಣರಾಗುವಂತೆ ಸಂಗೀತ ಪಾಠ ಮಾಡಿದರು.

## ಚಲನಚಿತ್ರದ ಗೀಳು

೧೯೭೨ರಲ್ಲಿ ಬೆಟ್ಟದ ಗೌರಿ ಎಂಬ ಚಲನಚಿತ್ರವನ್ನು ನನ್ನ ಮಿತ್ರ ಕಣಗಾಲ್ ಪ್ರಭಾಕರ ಶಾಸ್ತ್ರೀಯವರು ತೆಗೆಯಬೇಕೆಂದು ನಿರ್ಧರಿಸಿ, ಸಂಗೀತ ಸಂಯೋಜನೆಯ ಜವಾಬ್ದಾರಿಯನ್ನು ನನಗೆ ವಹಿಸಿ, ಒಳ್ಳೆಯ ಸಾಹಿತ್ಯ ರಚನೆಯ ಹಾಡುಗಳನ್ನು ಕೊಟ್ಟರು. ಆ ಹಾಡುಗಳನ್ನು ಹಾಡಲು ಕೆ.ಎಸ್.ಎಲ್.ಸ್ವಾಮಿ(ರವಿ) ಅವರನ್ನು ಮತ್ತು ಕಸ್ತೂರಿಶಂಕರ್ ಎಂಬ ಗಾಯಕಿಯನ್ನು ನೇಮಿಸಿಕೊಂಡರು. ಬೆಂಗಳೂರಿನ ಗಾಂಧಿನಗರದ ಬ್ರಾಡ್‌ವೇ ಹೋಟಲ್ ರೂಂ ಒಂದರಲ್ಲಿ ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದೆ. ಅಲ್ಲಿಗೆ ಶ್ರೀಮತಿ ಕಸ್ತೂರಿಶಂಕರ್ ಅವರನ್ನು ಪ್ರಭಾಕರ ಶಾಸ್ತ್ರೀಗಳು ಕರೆದುಕೊಂಡು ಬಂದು ಹಾಡಿಸಿದರು. ಒಳ್ಳೆಯ ಭಾವದಿಂದ ಹಾಡಿದ ಆಕೆಯ ಕಂಠವನ್ನು ಮೆಚ್ಚಿ ನಮ್ಮ ಚಲನಚಿತ್ರದಲ್ಲಿ ಹಾಡಿಸಲು ತೀರ್ಮಾನ ಮಾಡಿದರು.

## ಪ್ರಶಸ್ತಿಗಳು

೨೦೦೫ರಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿತು. ಅದೇ ವರ್ಷ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಯು ಅಂದಿನ ರಾಷ್ಟ್ರಪತಿಗಳಾಗಿದ್ದ ಅಬ್ದುಲ್ ಕಲಾಂರವರಿAದ ದೊರೆಯಿತು. ಇವುಗಳಲ್ಲದೆ ೨೦೦೬ರಲ್ಲಿ ಬೆಂಗಳೂರು ಗಾಯನ ಸಮಾನದ `ವರ್ಷ ಕಲಾವಿದ' ಪ್ರಶಸ್ತಿ, ಅಜಿತ್‌ಕುಮಾರ್ ಸ್ಮಾರಕ ನಾಟ್ಯಶ್ರೀ ಪ್ರಶಸ್ತಿ, ೨೦೦೮ರಲ್ಲಿ ಚಿಂತನಪಲ್ಲಿ ರಾಮಚಂದ್ರರಾವ್ ಟ್ರಸ್ಟ್ನ ಪ್ರಶಸ್ತಿ, ೨೦೦೯ರಲ್ಲಿ ಬೆಂಗಳರು ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ ಲಭಿಸಿತು. ೨೦೦೯ರಲ್ಲಿ ರಾಜ್ಯಮಟ್ಟದ ಕರ್ನಾಟಕ ರಂಗಸAಗೀತ ಪರಿಷತ್ತಿನ ಪ್ರಥಮ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾದರು.

## ಉಪಸಂಹಾರ

ಆರ್.ಪರಮಶಿವನ್ ಅವರು ಕರ್ನಾಟಕದಲ್ಲಿ ರಂಗಸAಗೀತಕ್ಕೆ ತನ್ನದೇ ಕೊಡುಗೆಯನ್ನು ನೀಡಿದ್ದಾರೆ. ವೃತ್ತಿಯಲ್ಲಿ ಸಂಗೀತ ಶಿಕ್ಷಕರಾಗಿ ಶಾಲೆಯಲ್ಲಿ ಮಕ್ಕಳಿಗೆ ಸಂಗೀತ ಕಲಿಸುತ್ತಿದ್ದರು. ಪ್ರವೃತ್ತಿಯಲ್ಲಿ ಒಬ್ಬ ಕಲಾವಿದರೂ ಆಗಿದ್ದರು. ಇವರು ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತ ಮತ್ತು ಸುಗಮಸಂಗೀತ, ಜಾನಪದ ಸಂಗೀತಗಳನ್ನು ಹಾಡುತ್ತಿದ್ದರು. ಹೊಸ ರಾಗಗಳನ್ನು ಹುಟ್ಟು ಹಾಕಿದರು. ನಾಟಕದಲ್ಲಿ ಸ್ವತಃ ಅವರೇ ಹೊಸ ರಾಗಗಳ ಮೂಲಕ ಸಂಗೀತವನ್ನು ಜನರಿಗೆ ಮನಮುಟ್ಟುವಂತೆ ಹಾಡುತ್ತಿದ್ದರು. ಇದು ಇವರ ವೈಶಿಷ್ಟö್ಯವಾಗಿದೆ.

## ಆಧಾರ ಗ್ರಂಥಗಳು


1. ಸುಮಿತ್ರಾಬಾಯಿ ಬಿ.ಎನ್., (ಪ್ರಧಾನ ಸಂಪಾದಕ: ಪ್ರಧಾನಗುರುದತ್) ಶ್ರೀರಂಗ, ನವಕರ್ನಾಟಕ ಪ್ರಕಾಶನ, ೨೦೦೯
2. ಸತ್ಯನಾರಾಯಣ ರಾ., ಕರ್ನಾಟಕ ಸಂಗೀತವಾಹಿನಿ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೧
3. ನಾಗವೇಣಿ ಹೆಚ್., ರಂಗಸAಪನ್ನರು (ಚಂದ್ರಶೇಖರಕAಬಾರ್), ಕರ್ನಾಟಕ ನಾಟಕ ಅಕಾಡೆಮಿ, ೨೦೦೪
4. ಪ್ರೊ.ಎ.ವಿ.ಸೂರ್ಯನಾರಾಯಣಸ್ವಾಮಿ, ರಂಗಗೀತಾರತ್ನ ಆರ್.ಪರಮಶಿವನ್, ಹನ್ಯಾಳು ಪ್ರಕಾಶನ, ಮೈಸೂರು, ೨೦೧೨.
5. ಶಾಸ್ತ್ರಿಬಿ.ವಿ.ಕೆ, ಗಾನಕಲಾಮಂಜರಿ, (ಸಂಪುಟ-೨), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೮
6. ಶಾಸ್ತ್ರಿ ಬಿ.ವಿ.ಕೆ, ಗಾನಕಲಾಮಂಜರಿ,(ಸಂಪುಟ-೧) ಕನ್ನಡ ಮತ್ತು ಸಂಸ್ಕೃತಿ ಇಲಾಕೆ ಬೆಂಗಳೂರು, ೧೯೯೫

7. ಶತಸಿರಿ, (ನೂರು ಉಪನ್ಯಾಸ ಕಾರ್ಯಕ್ರಮದ ಲೇಖನ ಮಾಲೆಗಳು), ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಚಿತ್ರದುರ್ಗ, ೨೦೧೫.
8. ಬಿ.ವಿ.ವೈಕುಂಠರಾಜು, ಕನ್ನಡ ರಂಗಭೂಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭
9. ಶಿ ಮುತ್ತುಸ್ವಾಮಿ, ಕನ್ನಡ ರಂಗಭೂಮಿಯ ದಿಗ್ಗಜರು, ಸಾಧನ ಪ್ರಕಾಶನ ಬೆಂಗಳೂರು, ೨೦೧೨
10. ವೆಂಕಟಾಪುರ ಎಸ್.ಎನ್., ಡಾ.ಪುಟ್ಟರಾಜ ಗವಾಯಿಗಳ ಜೀವನ ಸಾಹಿತ್ಯ, ಪ್ರಭುದೇವ ಪ್ರಕಾಶನ, ಹೊಸಳ್ಳಿ, ೨೦೧೦,
11. ಯೋಗಾನರಸಿಂಹ ಹೆಚ್.ಕೆ, ರಾಜಾವಿಕ್ರಮ, ಕನ್ನಡ ಪುಸ್ತಕಪ್ರಾಧಿಕಾರ, ಬೆಂಗಳೂರು, ೨೦೧೨
12. ಯೋಗಾನರಸಿಂಹ, ರಂಗಸಂಗೀತ, ಸ್ವರಪ್ರಸ್ತಾರದೊಂದಿಗೆ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ೧೯೮೯
13. ಅಕ್ಷರ, ರಂಗಭೂಮಿ - ಪೂರ್ವ ಪಶ್ಚಿಮ, ನೀನಾಸಂ ರಂಗ ಶಿಕ್ಷಣ ಕೇಂದ್ರ, ಸಾಗರ, ೧೯೮೨
14. ಆರ್.ಪರಮಶಿವನ್ ಮತ್ತು ಹೆಚ್.ಎಸ್.ಗೋವಿಂದಗೌಡ, ರಂಗಗೀತೆಗಳು-ಭಾಗ-೧, ಹನ್ಯಾಳು ಪ್ರಕಾಶನ, ಮೈಸೂರು, ೨೦೦೯
15. ಆರ್.ಪರಮಶಿವನ್ ಮತ್ತು ಹೆಚ್.ಎಸ್.ಗೋವಿಂದಗೌಡ, ರಂಗಗೀತೆಗಳು-ಭಾಗ-೨, ಹನ್ಯಾಳು ಪ್ರಕಾಶನ, ಮೈಸೂರು, ೨೦೦೯
16. ಆರ್.ಪರಮಶಿವನ್ ಮತ್ತು ಹೆಚ್.ಎಸ್.ಗೋವಿಂದಗೌಡ, ರಂಗಗೀತೆಗಳು-ಭಾಗ-೩, ಹನ್ಯಾಳು ಪ್ರಕಾಶನ, ಮೈಸೂರು, ೨೦೦೯
17. ರಂಗನಾಥ ಹೆಚ್.ಕೆ, ಬಣ್ಣಬೆಳಕು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೪